ಎಲ್ಲಾದರೂ ಹೂಡಿಕೆ ಮಾಡಿ ಮರಳುತ್ತಿದ್ದ. ಒಮ್ಮೊಮ್ಮೆ ಅಣ್ಣ ತನಗೆ ಸರಿಯಾಗಿ ಲೆಕ್ಕ ಒಪ್ಪಿಸುತ್ತಿದ್ದಾನೆಯೇ ಎನ್ನುವ ಸಂದೇಹ ಬಂದರೂ, ತಾನೇನು ಮಾಡಲಾದೀತು ಎಂದು ಸುಮ್ಮನಾಗಿ ಬಿಡುತ್ತಿದ್ದ. ಈಗ ಇದ್ದಕ್ಕಿದ್ದ ಹಾಗೆ ಹೀಗೊಬ್ಬ ವಕ್ಕರಿಸಿಕೊಂಡಿರುವುದಕ್ಕೂ, ಅಣ್ಣ ತನ್ನ ಕೈಯಲ್ಲೇನೂ ಇಲ್ಲವೆನ್ನುವ ಹಾಗೆ ಇರುವುದಕ್ಕೂ ಏನಾದರೂ ಸಂಬಂಧವಿದೆಯೇ ಎನ್ನುವ ಸಂದೇಹವೂ ಮೂಡಿತ್ತು. ಆದರೂ ಸತೀಶನಿಗೆ ಅಷ್ಟೆಲ್ಲ ಬುದ್ಧಿವಂತಿಕೆ ಇಲ್ಲ ಎಂದು ಪರೋಕ್ಷವಾಗಿ ತನ್ನ ಬೆನ್ನು ತಾನೇ ತಟ್ಟಿಕೊಂಡು ಸುಮ್ಮನಿದ್ದ.

ಒಮ್ಮೆ ನೇರವಾಗಿ ಅವನನ್ನೇ ಭೇಟಿ ಮಾಡಿ ಮಾತನಾಡಿದ್ದರೆ ಸರಿ ಹೋಗುತ್ತಿತ್ತೇನೋ. ಈ ದೂರದ ಊರಿನ ಕೋರ್ಟಿಗೆ ಈ ದೂಳಿನಲ್ಲಿ ಅಲೆದಾಡುವುದು ತಪ್ಪುತ್ತಿತ್ತು. ಸತೀಶನಿಗೇನೋ ಪರವಾಗಿಲ್ಲ. ಆದರೆ ತನಗೆ ಕಷ್ಟ ತಪ್ಪಲಿಲ್ಲ. ಅಪ್ಪಅಮ್ಮ ಸತ್ತಿರುವುದರಿಂದ ಒಡೆತನ ನಿರ್ಧರಿಸಲು ಅಣ್ಣತಮ್ಮಂದಿರ ರಕ್ತ ಪರೀಕ್ಷೆ ಆಗಬೇಕು ಎಂದು ಕೋರ್ಟು ತೀರ್ಮಾನಿಸಿತು. ಅದೇ ಕಾರಣಕ್ಕೇ ಅನೀಶ ಅಮೆರಿಕೆಯಿಂದ ಖುದ್ದಾಗಿ ಬಂದು ರಕ್ತದ ಮಾದರಿಯನ್ನು ನೀಡಬೇಕಾಯ್ತು.

ಅಲ್ಲಿಗೆ ಮುಗಿಯಿತೆ ಎಂದುಕೊಂಡರೆ ಅದೂ ಇಲ್ಲ. ರಕ್ತದ ಗ್ರೂಪಿನ ಪರೀಕ್ಷೆ ಆದ ಮೇಲೆ. ಡಿಎನ್ಎ ಪರೀಕ್ಷೆ ಆಗಬೇಕು ಎಂದು ವಾದಿ ಹಟ ಹಿಡಿದಿದ್ದರಿಂದ ಅದನ್ನೂ ಮಾಡಬೇಕಾಯಿತು. ಅದರ ಫಲಿತಾಂಶ ಈವತ್ತು ತಿಳಿಯುತ್ತದೆ. ರಕ್ತ ಪರೀಕ್ಷೆಯಲ್ಲಿ ಒಬ್ಬೊಬ್ಬರ ರಕ್ತದ ಗುಂಪೂ ಬೇರೆ, ಬೇರೆಯಾಗಿತ್ತು. ಸತೀಶನದ್ದು ಬಿ, ಅನೀಶನದ್ದು ಓ, ಹಾಗೂ 'ಅವನ'ದ್ದು ಎ. ಒಂದೇ ತಂದೆಯ ಮಕ್ಕಳಲ್ಲಿ ಹೀಗಾಗಲು ಸಾಧ್ಯ ಎಂದು ಅವನ ಲಾಯರು ವಾದಿಸಿ, ಡಿಎನ್ಎ ಪರೀಕ್ಷೆ ಮಾಡಿಸಲು ಕೇಳಿದ್ದ. ಕೋರ್ಟೂ ಒಪ್ಪಿಕೊಂಡಿತ್ತು. ಮೂರು ತಿಂಗಳಿನ ನಂತರ ಫಲಿತಾಂಶ ಬಂದಿದೆ. ಅನೀಶ ಮತ್ತೆ ಕೋರ್ಟಿಗೆ ಹಾಜರಾಗಬೇಕಾಯ್ತು. ಮೂರೇ ತಿಂಗಳ ನಂತರ ಮತ್ತೆ ಭಾರತಕ್ಕೆ ಬರಬೇಕಾಯ್ತು.

"ಇದರಿಂದ ನನ್ನ ಪ್ರಾಕ್ಟೀಸಿಗೆ ಎಷ್ಟು ನಷ್ಟವಾಯಿತು ಗೊತ್ತಾ?" ಅನೀಶ ಅಣ್ಣನ ಬಳಿ ದೂರಿದ್ದ. ಸತೀಶನಾದರೂ ಏನು ಹೇಳಬಲ್ಲ? ತಮ್ಮನಂತೆ ಚೆನ್ನಾಗಿ ಓದಿದ್ದರೆ ಬಹುಶಃ ತಾನೂ ಅಷ್ಟೇ ಗಡುಸಾಗಿ ಉತ್ತರಿಸುತ್ತಿದ್ದನೇನೋ? ಪಿಯುಸಿಯಲ್ಲಿ ಡುಮುಕಿ ಹೊಡೆದು ಅಪ್ಪನ ಬೆನ್ನ ಹಿಂದೆಯೇ ರಾಜಕೀಯ ಮಾಡಿಕೊಂಡು ಬೆಳೆದಿದ್ದ. ರಾಜಕೀಯ ಒಗ್ಗಲಿಲ್ಲ. ಕೊನೆಗೆ ಅಪ್ಪನ ಆಸ್ತಿಯನ್ನು ನೋಡಿಕೊಂಡು ಬದುಕುವ ಸ್ಥಿತಿ ಬಂತು. ಅವನದು ಕೂತು ಉಣ್ಣೂವ ಜೀವನ. ವಾಸ ಬೆಂಗಳೂರಲ್ಲಿ. ಆಸ್ತಿ ನೂರಾರು ಕಿಲೋಮೀಟರು ದೂರದ ಅಪ್ಪನ ತವರಿನಲ್ಲಿ. ನಗರ–ಹಳ್ಳಿಯ ನಡುವೆ ಓಡಾಡಿಯೋ ಸೋತು ಹೋಗಿದ್ದ. ಇತ್ತೀಚೆಗೆ ಜಮೀನಿನ ಪಕ್ಕ ಹರಿಯುತ್ತಿದ್ದ ಹೊಳೆ ಬತ್ತಿ ಕೃಷಿಯೂ ತೊಂದರೆಗೊಳಗಾಗಿತ್ತು. ಅರ್ಧಕ್ಕರ್ಧ ಜಮೀನು ಪಾಳು ಬಿದ್ದಿತ್ತು. ಈಗ ಕೋರ್ಟಿನ ಇಂಜಂಕ್ಷನ್ ಬೇರೆ.

"ಇವತ್ತಿಗೆ ಎಲ್ಲವೂ ತೀರ್ಮಾನವಾಗಿ ಬಿಡುತ್ತೆ ಬಿಡು" ಎಂದು ತನಗೂ, ತಮ್ಮನಿಗೂ ಸಮಾಧಾನದ ಮಾತುಗಳನ್ನು ಹೇಳಿದ ಸತೀಶ.

ಹೊರಗೆ ಬಿಸಿಲು ರಣಗುಡಲು ಆರಂಭಿಸಿತು. ಇವರ ಹಾಜರಿ ತೆಗೆದುಕೊಂಡ ನಂತರ ಹೊರಗೆ ಕಾಯಲು ಹೇಳಿದ್ದರು. ದರಿದ್ರದ ಊರು. ಕೋರ್ಟಿನ ಎದುರಿನ ರಸ್ತೆ ಬದಿಯಲ್ಲಿದ್ದ ಕೆಲವು ಮುರುಕಲು ಡಬ್ಬಿಯಂಗಡಿಗಳಲ್ಲಿ ಪುಟ್ಟ ವಸ್ತುಗಳ ಹೊರತಾಗಿ ಏನೂ ಸಿಗುತ್ತಿರಲಿಲ್ಲ. ಅನೀಶ ತಂದಿದ್ದ ಬಾಟಲು ಖಾಲಿಯಾಗಿ, ಗಾಳಿ ಬೀಸಿದಾಗೆಲ್ಲ ಗೊಣಗಾಡುತ್ತಿದ್ದ. ಎಷ್ಟು ಹೊತ್ತಿಗೆ ಕರೆ ಬರುತ್ತದೆಯೋ ಗೊತ್ತಿಲ್ಲ. ಹೊಟ್ಟೆ ಹಸಿವಿನಿಂದ ಚುರುಗುಡುತ್ತಿತ್ತು. ಅದರ